ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-

ಅ) 628 ಪ್ರಕರಣಗಳಲ್ಲಿ ಒಟ್ಟು 16,616 ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ.

ಆ) ಇಲ್ಲ.

ಇ) ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸ್ವೀಕರಿಸಲಾಗುವ ಮನವಿಗಳನ್ನು ಪರಿಶೀಲಿಸಿ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ವಿಷಯ :- ದ. ಕ. ಜಿಲ್ಲೆಯಲ್ಲಿ ಆಹಾರ ಪಡಿತರ ಚೀಟಿಗಳ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 933 (1393)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ 5 ತಿಂಗಳುಗಳಿಂದ ಬೇರೆ ಬೇರೆ ಕಾರಣಗಳಿಗಾಗಿ ರದ್ದುಗೊಳಿಸಲಾಗಿದ ಮತ್ತು ಹೆಚ್ಚುವರಿ ನೀಡಲಾದ ಹಸಿರು ಪಡಿತರ ಕಾರ್ಡು ಫಲಾನುಭವಿಗಳ ಸಂಖ್ಯೆ ಎಷ್ಟು ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನ ಸಂಪರ್ಕ ಸಭೆ, ಗ್ರಾಮಸಭೆಗಳು ಅಲ್ಲದೆ ಖಾಸಗಿಯಾಗಿ ಹಸಿರುಪಡಿತರ ಕಾರ್ಡ್ ಕೇಳಿ ಮನವಿ ಸಲ್ಲಿಸಿದವರ ಸಂಖ್ಯೆ ಎಷ್ಟು; (ತಾಲ್ಲೂಕು ವಾರು ಮಾಹಿತಿ ನೀಡುವುದು)

ಇ) ಹೊಸ ಹಸಿರು ಪಡಿತರ ಕಾರ್ಡ್ ನೀಡುವಾಗ ಮತ್ತು ಹಳೇ ಹಸಿರು ಕಾರ್ಡ್ ರದ್ದುಗೊಳಿಸುವಾಗ ಜಿಲ್ಲೆಯಲ್ಲಿ ಬಹಳಷ್ಟು ಬಡವರಿಗೆ ಅನ್ಯಾಯವಾಗಿರುವ ವಿಷಯ ಹಾಗೂ ಇಲಾಖೆಯಲ್ಲಿ ತಾರತಮ್ಯವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) 1,47,067

80,105 ಹಸಿರು ಕಾರ್ಡ್, 26680 ಕೇಸರಿ ಕಾರ್ಡ್ ಹಾಗೂ 40,282 ಭಾವಚಿತ್ರ ಪಡಿತರ ಚೀಟಿಗಳನ್ನು ಕಳೆದ 5 ತಿಂಗಳಲ್ಲಿ ರದ್ದುಗೊಳಿಸಲಾಗಿದೆ. ಹೊಸದಾಗಿ ಹಸಿರು ಪಡಿತರ ಚೀಟಿ ನೀಡಲು ಫಲಾನುಭವಿಗಳನ್ನು ಗುರುತಿಸಲು ಗ್ರಾಮಸಭೆಗಳನ್ನು ನಡೆಸಿ ಭಾವಚಿತ್ರ ಪಡಿತರ ಚೀಟಿಗಳನ್ನು ಹಸಿರು ಪಡಿತರ ಚೀಟಿಗಳಿಗೆ ಬದಲಾಯಿಸಿ ಕೊಡುವಾಗ ಈ ಪಡಿತರ ಚೀಟಿಗಳನ್ನು ಪತ್ತೆಹಚ್ಚಿ ರದ್ದುಗೊಳಿಸಲಾಗಿದೆ.

ಹೊಸದಾಗಿ ಹಸಿರು ಪಡಿತರ ಚೀಟಿಗಳನ್ನು ವಿತರಿಸಲು 8,61,816 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ) 38,126 ಅರ್ಜಿಗಳನ್ನು ಜಿಲ್ಲೆಯಲ್ಲಿ ಸ್ವೀಕರಿಸಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿರುತ್ತದೆ.

ಮಂಗಳೂರು	6281
ಬಂಟ್ವಾಳ	5141
ಪುತ್ತೂರು	1961
ಬೆಳ್ತಂಗಡಿ	4839
ಸುಳ್ಯ	2241
ಉಡುಪಿ	5956
ಕುಂದಾಪುರ	8866
ಕಾರ್ಕಳ	2841
ಒಟ್ಟು	38126

ಇ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ವಿಷಯ :- 1995-96 ನೇ ಸಾಲಿನಲ್ಲಿ ಭಾಗ್ಯಜ್ಯೋತಿ ಯೋಜನೆಯಲ್ಲಿ ಗುರುತಿಸಿದ ಫಲಾನುಭವಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 934 (780)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ 1995-96 ನೇ ಸಾಲಿನಲ್ಲಿ ಗುರುತಿಸಿದ ಫಲಾನುಭವಿಗಳ ಸಂಖ್ಯೆ.

ಆ) ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ಪೂರ್ತಿಯಾದ ಫಲಾನುಭವಿಗಳೆಷ್ಟು?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ್ (ಇಂಧನ ರಾಜ್ಯ ಸಚಿವರು) :-

ಅ) 1995-96 ನೇ ಸಾಲಿನಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಗುರುತಿಸಲಾದ ಫಲಾನುಭವಿಗಳ ಒಟ್ಟು ಸಂಖ್ಯೆ 1,88,857.

ಆ) 1995-96 ನೇ ಸಾಲಿನಲ್ಲಿಯೂ ಸಹ ಭಾಗ್ಯಜ್ಯೋತಿ ಯೋಜನೆಯನ್ನು ಜಾರಿಗೊಳಿಸಲಾಯಿತು. ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆದ ಫಲಾನುಭವಿಗಳ ಸಂಖ್ಯೆ 1,63,693.